# ಹುಚ್ಚಿಯ ಪಾತ್ರವೂ ನನ್ನ ಕನಸು

## ಮಂಜುಳಾ ಎ.ಎಂ.

ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು' ನಟಿ

◆ **'ಅಳಿಸುವುದಕ್ಕಿಂತ ನಗಿಸುವುದೇ ಕಲಾವಿದನಿಗೆ ಕಷ್ಟ' ಅಂತಾರೆ. ನಿಮಗೇನು ಅನ್ನಿಸುತ್ತದೆ?**

ಅಳಿಸುವುದು ಮತ್ತು ನಗಿಸುವುದು ಎರಡೂ ಸುಲಭ ಅಲ್ಲ. ಹಾಗೆ ನೋಡಿದರೆ ನಗಿಸುವುದಕ್ಕೆ ಏನಾದರೂ ಮಾಡಬಹುದು. ನಮ್ಮ ನೋವು ಮತ್ತೊಬ್ಬರಿಗೆ ನಗೆ ತರಿಸಬಹುದು. ಇಲ್ಲವೇ ಏನಾದರೂ ಕಿತಾಪತಿ ಮಾಡಿ ನಗೆ ಹುಟ್ಟಿಸಬಹುದು. ಅಳಿಸುವುದು ಹಾಗಲ್ಲ. ಅದಕ್ಕೆ ನಿರ್ದಿಷ್ಟ ಕಾರಣಗಳು ಇರಲೇಬೇಕು. ಸುಮ್ಮ ಸುಮ್ಮನೇ ಅಳುವುದಿಲ್ಲ. ಒಬ್ಬರ ನೋವು ಮತ್ತೊಬ್ಬರಿಗೆ ನಾಟಬೇಕು ಎಂದರೆ ಅದಕ್ಕೆ ಭಾವುಕ ಸೆಲೆ ಇರಲೇಬೇಕು. ಹಾಗಾಗಿ ನನಗೆ ಎರಡೂ ಕಷ್ಟ ಎಂದು ಅನ್ನಿಸುತ್ತದೆ.

◆ **ನಿಮ್ಮ ಪರಿಚಯ ಹೇಳಿ.**

ಹಾಸನ ಜಿಲ್ಲೆ, ಬೇಲೂರು ತಾಲ್ಲೂಕಿನ ಅಡಗೂರು. ನನಗೆ ಅಕ್ಕ ಇದ್ದಾಳೆ. ನಮ್ಮಿಬ್ಬರನ್ನು ಪೋಷಕರು ಚೆನ್ನಾಗಿ ಸಾಕಿದ್ದಾರೆ. ಅಪ್ಪ ಹಮಾಲಿ ಕೆಲಸ ಮಾಡುತ್ತಿದ್ದರು. ಅಮ್ಮ ಕೃಷಿ ಕೂಲಿ ಕೆಲಸ ಮಾಡುತ್ತಿದ್ದರು. ನಾನು ಪಿಯು ನಂತರ ಮುಂದಕ್ಕೆ ಓದಲು ಹೋಗಲಿಲ್ಲ. ಏಕೆಂದರೆ ಅಕ್ಕನಿಗೆ ಮಗು ಆಯಿತು. ತಾಯಿ ಬಾಣಂತನ ಮಾಡುತ್ತಿದ್ದರಿಂದ ಕೆಲಸಕ್ಕೆ ಹೋಗಲು ಆಗುತ್ತಿರಲಿಲ್ಲ. ನಾನು ಓದನ್ನು ಬಿಟ್ಟು ಕೂಲಿ ಕೆಲಸಕ್ಕೆ ಹೊರಟೆ. ಆಗ ಅಪ್ಪನಿಗೆ ಕುಡಿತದ ಅಭ್ಯಾಸ ಇತ್ತು. ಮನೆಯಲ್ಲಿ ಹಣಕಾಸಿನ ಅಡಚಣೆ ಇದ್ದಿದ್ದರಿಂದ ನಾನು ದುಡಿಯಲೇಬೇಕಿತ್ತು. ಅದರಲ್ಲೇ ಜೀವನ ನಡೀತಾ ಇತ್ತು. ನನ್ನ ಕಾಲೇಜು ಗೆಳತಿ ಲಕ್ಷ್ಮಿ 'ಹಾಸನದಲ್ಲಿ ಒಂದು ಕಂಪನಿ ಇದೆ. ಅಲ್ಲೇ ಮಧ್ಯಾಹ್ನ ಊಟ ಕೊಡ್ತಾರಂತೆ ಅಲ್ಲಿಗೆ ಕೆಲಸಕ್ಕೆ ಹೋಗೋಣ ಬಾ' ಎಂದು ಗಾರ್ಮೆಂಟ್ಸ್‌ಗೆ ಕರೆದುಕೊಂಡು ಹೋದಳು. ಮೂರು ವರ್ಷ ಕೆಲಸ ಮಾಡಿದೆ. ಕೆಲಸ ಬಿಟ್ಟು ಪಿಎಫ್ ದುಡ್ಡು ತೆಗೆದುಕೊಂಡು ಮನೆ ದುರಸ್ತಿ ಮಾಡಿಸಿದೆ. ಅದೇ ಸಮಯದಲ್ಲಿ ನಮ್ಮ ಅಪ್ಪನಿಗೆ ಕುಡಿತವನ್ನೂ ಬಿಡಿಸಿ ಮತ್ತೆ ಅದೇ ಗಾರ್ಮೆಂಟ್ಸ್‌ಗೆ ಕೆಲಸಕ್ಕೆ ಸೇರಿದೆ.

◆ **ನಟನೆ ಮಾಡಬೇಕು ಅಂತ ಅನಿಸಿದ್ದು ಹೇಗೆ?**

ಹಾಸನದಿಂದ ಊರಿಗೆ ದಿನಾ ಓಡಾಡುತ್ತಿದ್ದೆ. ಮಾರ್ಗದಲ್ಲಿ 'ಕಾಮಿಡಿ ಕಿಲಾಡಿಗಳು' ಪೋಸ್ಟರ್ ಹಾಕಿದ್ದರು. ಹತ್ತಾರು ಪೋಸ್ಟರ್‌ಗಳನ್ನು ದಿನಾ ನೋಡಿದ್ದರಿಂದ ಹೋಗುವ ಮನಸ್ಸು ಮಾಡಿದೆ. ನನಗೆ ಮೊದಲಿನಿಂದಲೂ ನಟಿಸಬೇಕು ಎಂಬ ಆಸೆಯಂತೂ ಇತ್ತು. ನಟನೆ ಮಾಡಿ ಗೊತ್ತಿಲ್ಲ. ಹೇಗೆ ಹೋಗುವುದು ಎಂದೂ ಗೊತ್ತಿಲ್ಲ. ನಮ್ಮ ಮನೆಯವರಿಗೂ ಗೊತ್ತಿಲ್ಲ. ಆಡಿಷನ್ ಹೋಗುವ ನಿರ್ಧಾರ ಮಾಡಿ ಗೆಳತಿ ದಿವ್ಯಾಳ ಜೊತೆಗೆ ಬೆಂಗಳೂರಿಗೆ ಬಂದು ಆಡಿಷನ್ ನೀಡಿ ಪುನಃ ಕೆಲಸಕ್ಕೆ ಹೋದೆ.

◆ **ನಟನೆ ಮಾಡಿದ ಅನುಭವ ಏನಾದರೂ ಇತ್ತಾ?**

ಗೊತ್ತಿರಲಿಲ್ಲ. ಚಿಕ್ಕವಳಿದ್ದಾಗ ಟೀವಿ ನೋಡಲು ನಮ್ಮೂರಲ್ಲಿ ಒಬ್ಬರ ಮನೆಗೆ ಹೋಗುತ್ತಿದ್ದೆ. ಅವರ ಮನೆಯಲ್ಲಿ ಶಿಲ್ಪಕ್ಕ ಅಂತ ಇದ್ರು. ಅವರು ನಾವು ನೋಡಿದ ಸಿನಿಮಾ ಪಾತ್ರಗಳನ್ನು ಕೇರಿಯ ಹುಡುಗರಿಗೆಲ್ಲ ಹಂಚಿ ಮಾಡಿಸುತ್ತಿದ್ದರು. ಒಮ್ಮೆ 'ಶಾಂಭವಿ' ಸಿನಿಮಾ ನೋಡಿದ್ದೆವು. ನನಗೆ ನಾಯಿ ಪಾತ್ರ ಕೊಟ್ಟಿದ್ದರು. ಬೇಬಿ ಶಾಮಿಲಿ ಪಾತ್ರ ಮಾಡಲು ಇಷ್ಟ ಅಂದಿದ್ದೆ. ಪಾತ್ರ ಎಲ್ಲ ಒಂದೇ, ಮಾಡು ಅಂತ ಹುರಿದುಂಬಿಸಿದರು. ನಾನು ಸಿನಿಮಾ ನೋಡಿದರೆ ಮರೆಯಲ್ಲಿ ನಿಂತು ಅನುಕರಣೆ ಮಾಡುತ್ತಿದ್ದೆ. ಅಭಿನಯ ಇಷ್ಟ. ಶಾಲೆಯಲ್ಲೂ ಸೇರಿದಂತೆ ಎಲ್ಲೂ ನಟನೆ ಮಾಡಿಲ್ಲ. ಈವರೆಗೆ ಯಾವ ವೇದಿಕೆಯನ್ನೂ ಹತ್ತಿಲ್ಲ. ಇದೇ ಮೊದಲ ಬಾರಿಗೆ ಬಣ್ಣವನ್ನು ಹಚ್ಚಿದ್ದೇನೆ.

◆ **ಬಣ್ಣ ಹಚ್ಚಿದ ಮೊದಲ ಅನುಭವ ಹೇಗಿತ್ತು?**

ಹೆದರಿ ಜ್ವರ ಬಂದಿತ್ತು. ನನ್ನ ಅಕ್ಕನಿಗೆ ಫೋನ್ ಮಾಡಿ ಮನೆಗೆ ಬರ್ತೀನಿ ಅಂದೆ. ಅವಳು ಬೈದ್ಲು. ಈಗಲೂ ಭಯ ಇದ್ದೇ ಇದೆ. ಹೆಂಗೆ ಮಾಡುವುದು ಎಂದು ಬೆರಗಾಗಿದ್ದೆ. ಇಲ್ಲಿಯ ಪರಿಸರ ಏನೂ ಗೊತ್ತಾಗಲ್ಲ, ಎಲ್ಲ ಕಲಿಯಬೇಕು.

◆ **ತಾಲೀಮು ಹೇಗೆ ನಡೆಯುತ್ತಿದೆ? ಮುಂದಿನ ದಾರಿ ಹೇಗೆ ಏನು ಯೋಚಿಸಿದ್ದೀರಿ?**

ಮುಂದೆ ಹೇಗೆ ಅಂತ ಗೊತ್ತಿಲ್ಲ. ಇಲ್ಲೇ ಮುಂದುವರಿಯುವ ಆಸೆ ಇದೆ. ದೇವರು ಹೇಗೆ ದಾರಿ ತೋರಿಸುತ್ತಾನೆ ನೋಡಬೇಕು. ಏನೂ ಇಲ್ಲ ಅಂದರೂ ನಮ್ಮ ಗಾರ್ಮೆಂಟ್‌ನಲ್ಲಿ ಕೆಲಸ ಇದ್ದೇ ಇರುತ್ತದೆ. ಇಲ್ಲಿ ನಿತ್ಯವೂ ಕಲಿಯುವುದು ಇದ್ದೇ ಇರುತ್ತದೆ. ನೋಡಿ–ಕೇಳಿ ಕಲಿಯುತ್ತೇನೆ. ನಿರ್ದೇಶಕರೂ ಹೇಳಿದ್ದನ್ನು ಚಾಚೂ ತಪ್ಪದೆ ಪಾಲಿಸುತ್ತೇನೆ. ನಮ್ಮಲ್ಲಿ ಅನೇಕ ರೂಪಕಗಳು ಉತ್ತರ ಕರ್ನಾಟಕ ಆಡು ಭಾಷೆಯಲ್ಲಿ ಇರುತ್ತವೆ. ಅಲ್ಲಿನ ಭಾಷೆ ನನಗೆ ಅಷ್ಟು ಗೊತ್ತಿಲ್ಲ. ಇಲ್ಲಿ ಕೆಲವು ತಪ್ಪು ಒಪ್ಪುಗಳನ್ನು ತಿದ್ದುತ್ತಾರೆ.

ನನಗೆ ಹುಚ್ಚಿ ಪಾತ್ರ ಮಾಡಬೇಕು ಎನ್ನುವ ಆಸೆ ಇದೆ. ಎಂತಹದ್ದೇ ಪಾತ್ರ ಸಿಕ್ಕರೂ ಅದನ್ನು ಮಾಡಬೇಕು. ಅದರಲ್ಲೂ ಚಿಕ್ಕ ಮಕ್ಕಳ ಪಾತ್ರವನ್ನು ಮಾಡಬೇಕು. ಯಾವ ಪಾತ್ರ ಆದರೂ ಸರಿ, ಇಷ್ಟಪಟ್ಟೇ ಮಾಡ್ತೀನಿ.

■ **ರಾಘವೇಂದ್ರ ಕೆ.**

